ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್‌ನಾಮೆ.

ತಾರೀಖು 21ನೆ ಡಿಸೆಂಬರ್ 1903.

ನಂ. 1373—7106, ಹಾಸನದ ಡಿವೀಜನಿನ ಎಕ್ಜಿಕ್ಯೂಟಿವ್ ಇಂಜನಿಯರಾದ ವೆ|| ಸಿ. ಎ. ಮಹದೇವಶಾಸ್ತ್ರಿಯವರಿಗೆ ಕ್ರಿಸ್ತಮಸ್ ರಜಾದೊಂದಿಗೆ ಬಂದು ವಾರದ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 22ನೆ ಡಿಸೆಂಬರ್ 1903.

ನಂ. 1377—7116, ಹಾಸನ ಡಿವೀಜನಿಗೆ ಕೇದ ಸಬ್ ಅಸಿಸ್ಟೆಂಟ್ ಇಂಜಿನಿಯರಾಗಿ ವೆ|| ಎಂ. ಎ. ಆನಂದಾಳ್ವಾರ್ ಯವರಿಗೆ 1903ನೆ ನವಂಬರ್ 8ನೆ ತಾರೀಖಿನಾರಭ್ಯ ಹನ್ನೆರಡು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೆ ಡಿಸೆಂಬರ್ 1903.

ನಂ. 1378—7117, ಹಾಸನ ಡಿವೀಜನಿಗೆ ಕೇರಿದ ಸಬ್ ಅಸಿಸ್ಟೆಂಟ್ ಇಂಜಿನಿಯರಾದ ವೆ|| ಎಂ. ಎ. ಆನಂದಾಳ್ವಾರ್ ಯವರಿಗೆ ಕ್ರಿಸ್ತಮಸ್ ರಜಾದಿನಗಳೊಂದಿಗೆ ಬಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಎಸ್. ಟ್ರೀಲ್, ಕ್ಯಾಪ್ಟೆನ್ ಆರ್. ಇ.,
ಫಾರ್ ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖಾ ಗವರ್ನ್‌ಮೆಂಟ್ ಸೆಕ್ರಿಟೆರಿ.

ಮುಜರೈ.

ಇಸ್ತಿಹಾರ್‌ನಾಮೆ.

ತಾರೀಖು 19ನೆ ಡಿಸೆಂಬರ್ 1903.

ನಂ. 1732—ಮುಜ. ಫೈ. 409-93, ಕೋಣನೂರಲ್ಲಿ ವಾಸಿಸುವ ಮಾ|| ರಾ|| ರಾ|| ಸುಬ್ಬರಾಯ ಉರಫ್ ಗುಂಡಪ್ಪನವರು ಆರಕಲಗೂಡು ತಾಲ್ಲೂಕಿನ ರಾಮನಾಥಪುರದಲ್ಲಿರುವ ಶ್ರೀ ಅಗಸ್ತ್ಯೇಶ್ವರಸ್ವಾಮಿಯ ದೇವಸ್ಥಾನದ ಧರ್ಮದರ್ಸಿಯರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿ ರಾವ್,
ಮುಜರೈ ಇಲಾಖೆಯ ಡೆಪ್ಯುಟಿ ಸೆಕ್ರಿಟೆರಿ.

ಮಿಲಿಟೆರಿ

ಇಸ್ತಿಹಾರ್‌ನಾಮೆ.

ತಾರೀಖು 21ನೆ ಡಿಸೆಂಬರ್ 1903.

ನಂ. 1930—2, ಮೈಸೂರು ಸಂಸ್ಥಾನ ಫೂಜ್‌ಗಳ ಚೀಫ್ ಕಮ್ಯಾಂಡೆಂಟರಾದ ಲೆಫ್ಟಿನೆಂಟ್ ಕರ್ನಲ್ ಜೆ. ದೇಶರಾಜೆ ಅರಸಿನವರಿಗೆ, ಮಾಹೆ ಮಜಕೂರು 4ನೆ ಮುಕ್ತುಂ 1750—2ನೆ ಮತ್ತು ಮಾಹೆ ಮಜಕೂರು 10ನೆ ಮುಕ್ತುಂ 1818—20ನೆ ನಂಬರ್ ಇಸ್ತಿಹಾರ್ನ ಮೆಗಳಲ್ಲಿ ಕೊಟ್ಟಿದ್ದ ಪ್ರಿವಿಲೇಜ್ ರಜಾವನ್ನು ಅವರು ಉಪಯೋಗಿಸಿಕೊಂಡು ಮಾಹೆ ಮಜಕೂರು 15ನೆ ತಾರೀಖಿನಲ್ಲಿ ತಮ್ಮ ಆಫೀಸಿನ ಚಾರ್ಜ್‌ನ್ನು ಪುನಶ್ಚ ವಹಿಸಿರುತ್ತಾರೆ.